**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ.1770/2021**

ದಿಃ 30-10-2025.

| | | |
|---|---|---|
| ಹೆಸರು | ಡಾ. ಕೆ.ಆರ್. ನಾಗರಾಜ್ | ಸಿಡಬ್ಲ್ಯೂ- 07 |
| ತಂದೆ ಹೆಸರು | ರಂಗನಾಥಶೆಟ್ಟಿ | ಪಿ ಡಬ್ಲ್ಯೂ- 06 |
| ವಯಸ್ಸು | ಸು. 42 ವರ್ಷ | |
| ಉದ್ಯೋಗ | ವೈದ್ಯಾಧಿಕಾರಿಗಳು | |
| ವಾಸಸ್ಥಳ | ಚಳ್ಳಕೆರೆ | ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ.24.12.2015 ರಿಂದ ದಿಃ01-12-2023 ರವರೆಗೆ ನಾನು ನಾಯಕನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸ್ತ್ರೀ ರೋಗ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15-04-2021 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 11-00 ಗಂಟೆ ಸಮಯದಲ್ಲಿ ಚಾಸಾ.1 ರವರು ಹಲ್ಲೆಗೆ ಒಳಗಾದ ಮೇರೆಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿರುತ್ತಾರೆ. ಸದರಿಯವರನ್ನು ಪರೀಕ್ಷಿಸಲಾಗಿ

1) ಬಲ ಎದೆಯ ಭಾಗದಲ್ಲಿ ನೋವು ಎಂದು ತಿಳಿಸಿರುತ್ತಾರೆ.

ಈ ಮೇಲಿನ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ಈ ಕುರಿತು ನಾನು ತನಿಖಾಧಿಕಾರಿಗಳಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ಸದರಿ ಗಾಯದ ಪ್ರಮಾಣ ಪತ್ರವನ್ನು ನಿ.ಪಿ.5 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ5(ಎ) ಅಂತ ಗುರುತಿಸಲಾಯಿತು. ಮೇಲಿನ ಗಾಯವು ಮು.ಮಾ-1 ರಂತಹ ವಸ್ತುಗಳಿಂದ ಹಲ್ಲೆ ಮಾಡಿದರೆ ನಿಪಿಃ5 ರಲ್ಲಿ ಹೇಳಿರುವಂತಹ ಗಾಯವು ಆಗುವ ಸಾಧ್ಯತೆಗಳಿರುತ್ತವೆ.

**ಪಾಟೀ ಸವಾಲುಃ ಶ್ರೀ ಟಿ.ಟಿ., ಆರೋಪಿತರ ಪರ ವಕೀಲರಿಂದಃ**

ಚಾಸಾ-1 ರವರ ಜೊತೆಗೆ ಸದರಿಯವರ ತಂದೆ ತಿಪ್ಪೇಸ್ವಾಮಿಯವರು ಬಂದಿರುತ್ತಾರೆ. ಚಿಕಿತ್ಸೆಯನ್ನು 15 ನಿಮಿಷಗಳ ನಾನು ಚಾಸಾ-1 ರವರಿಗೆ ನೀಡಿರುತ್ತೇನೆ. ಚಿಕಿತ್ಸೆ ನೀಡಿದ ಅವಧಿಯನ್ನು ಗಾಯದ ಪ್ರಮಾಣಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಮು.ಮಾ-1 ರಿಂದ ಎದೆಯ ಭಾಗಕ್ಕೆ ಹಲ್ಲೆ ಮಾಡಿದರೆ ಸದರಿ ಜಾಗದಲ್ಲಿ ರಕ್ತ ಹೆಪ್ಪುಗಟ್ಟುತ್ತದೆ ಎಂದರೆ ಸಾಕ್ಷಿಯು ರಕ್ತದ ಹೆಪ್ಪುಗಟ್ಟುವಿಕೆ ಹಲ್ಲೆಯ ತೀವ್ರತೆಯ ಮೇಲೆ ಅವಲಂಬಿತವಾಗಿದೆ ಎಂದು ನುಡಿಯುತ್ತಾರೆ. ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಭಾರವಾದ ವಸ್ತುವನ್ನು ಎತ್ತಿದಾಗ ಅಥವಾ ಹೊಟ್ಟೆ ಉಬ್ಬರವಾದಾಗ ಎದೆ ನೋವು ಕಾಣಿಸುತ್ತದೆ ಎಂದರೆ ಸರಿ. ದಿಃ15-04-2021 ರಂದು ಚಾಸಾ-1 ರವರು ತನ್ನ ತಂದೆಯೊಟ್ಟಿಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿಲ್ಲ ಮತ್ತು ನಾನು ನಿಪಿಃ5 ರಂತೆ ಗಾಯದ ಪ್ರಮಾಣಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.